ಶ್ರೀ ಜಿ. ಎಸ್. ಬಸವರಾಜ್.—ತಾವು ನನ್ನ ಪ್ರಶ್ನೆಗೆ ಉತ್ತರವಾಗಿ ಕೊಟ್ಟ ಪಟ್ಟಿಯಲ್ಲಿ ಅನೇಕ ಹಳ್ಳಿಯ ರೋಡುಗಳನ್ನು ತಮ್ಮ ಇಲಾಖೆಗೆ ಸೇರಿಸಿಕೊಂಡಿಲ್ಲ. ಈಗಲಾದರೂ ತಾವು ಈ ಹಳ್ಳಿಗಳನ್ನು ತಮ್ಮ ಇಲಾಖೆಗೆ ಸೇರಿಸಿಕೊಂಡು ಸದರಿ ರಸ್ತೆಗಳನ್ನು ರಿಪೇರಿಮಾಡಲಿಕ್ಕೆ ಆದೇಶ ಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಹಳ್ಳಿಗಳಲ್ಲಿ ಹಟ್ಟಿ ಮತ್ತು ಕಾಲೋನಿಗಳು ಏನು ಇವೆ ಅವುಗಳಿಗೂ ಸಹ ಸರಿಯಾದ ರಸ್ತೆಗಳನ್ನು ಮಾಡಬೇಕು. ನನ್ನ ಕ್ಷೇತ್ರದಲ್ಲಿ ಈ ರಸ್ತೆಗಳನ್ನು ವುದಕ್ಕೆ ಸರ್ಕಾರದವರು ಸೂಕ್ತ ಆದೇಶವನ್ನು ಕೊಡುವರೇ ?

ಶ್ರೀ ಹೆಚ್. ಡಿ. ದೇವೇಗೌಡ.—ನಾವು ಎಲ್ಲಾ ರಸ್ತೆಗಳನ್ನು ನಮ್ಮ ಇಲಾಖೆಗೆ ಸೇರಿಸಿಕೊಳ್ಳ ತಕ್ಕದ್ದು ಆರ್ಥಿಕ ಮುಗ್ಗಟ್ಟಿನಿಂದ ಸಾಧ್ಯವಾಗಿಲ್ಲ. ಮತ್ತೆ ಮಾನ್ಯ ಸದಸ್ಯರು ಪರಿಶಿಷ್ಟ ವರ್ಗದವರಿಗೆ ರಸ್ತೆಗಳನ್ನು ಮಾಡಿಸಬೇಕು ಎಂದು ಹೇಳಿದ್ದಾರೆ. ನಮ್ಮಲ್ಲಿ ಟ್ರೈಬಲ್ ಸ್ಕೀಂ ಎಂದು ಹೇಳಿ ಒಂದು ಯೋಜನೆ ಇದ್ದು ಇದರ ಪ್ರಕಾರ ಒಂದೊಂದು ತಾಲ್ಲೂಕಿಗೆ ಒಂದೆರಡು ಮೂರು ರಸ್ತೆಗಳನ್ನು ತೆಗೆದು ಕೊಳ್ಳಲಿಕ್ಕೆ ಹಣವನ್ನು ನಾವು ಒದಗಿಸಿದ್ದೇವೆ. ಮತ್ತು ಆದ್ಯತೆಯ ಮೇಲೆ ಕೆಲಸಗಳನ್ನು ಮಾಡು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಜಿ. ಎಸ್. ಬಸವರಾಜ್.—ದಯಮಾಡಿ ಮಾನ್ಯ ಮಂತ್ರಿಗಳು ನನ್ನ ಕ್ಷೇತ್ರದಲ್ಲಿರುವ ಹಳ್ಳಿ ಗಳನ್ನು ತಮ್ಮ ಇಲಾಖೆಗೆ ಸೇರಿಸಿಕೊಂಡು ಅವುಗಳಿಗೆ ಸರಿಯಾದ ರಿಪೇರಿ ಮಾಡುವುದಕ್ಕೆ ಸೂಕ್ತ ಆದೇಶ ವನ್ನು ಕೊಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಈ ಹಳ್ಳಿಗಳನ್ನು ನಮ್ಮ ಇಲಾಖೆಗೆ ಸೇರಿಸಿಕೊಂಡರೆ ನಮಗೆ ಸುಮಾರು 45 ಲಕ್ಷ ರೂಪಾಯಿಗಳು ಬೇಕಾಗುತ್ತದೆಂದು ಹೇಳುವ ಅಂದಾಜು ಪಟ್ಟಿ ನನ್ನಲ್ಲಿದೆ. ಇವೆಲ್ಲ ವನ್ನೂ ಒಟ್ಟಿಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದೇ ಇದ್ದರೂ ಕೆಲವೊಂದನ್ನು ಮಾತ್ರ ತೆಗೆದುಕೊಳ್ಳು ವುದಕ್ಕೆ ಪ್ರಯತ್ನ ಮಾಡುತ್ತೇವೆ.

ವಿಷಯ :— ಮೊಳಕಾಲ್ಮೂರು ತಾಲ್ಲೂಕಿನಲ್ಲಿ ರೇಷ್ಮೆ ಕೈಗಾರಿಕೆಯ ಸ್ಥಾಪನೆ.

ಪ್ರಶ್ನೆ 127(76) ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು).—ಮಾನ್ಯ ಕೈಗಾರಿಕಾ ಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಮೊಳಕಾಲ್ಮೂರು ತಾಲ್ಲೂಕನ್ನು ಕೈಗಾರಿಕೆಗಳಿಂದ ಹಿಂದುಳಿದ ಪ್ರದೇಶವೆಂದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ. ಹಾಗಿದ್ದಲ್ಲಿ ಮೊಳಕಾಲ್ಮೂರು ತಾಲ್ಲೂಕನ್ನು ಕೈಗಾರಿಕೆಗಳಿಂದ ಹಿಂದುಳಿದ ಪ್ರದೇಶವೆಂದು ಸರ್ಕಾರದವರು ಘೋಷಿಸುವರೇ ;

ಇ. ಮೊಳಕಾಲ್ಮೂರು ತಾಲ್ಲೂಕ ರೇಷ್ಮೆ ಕೈಗಾರಿಕೆಯಲ್ಲಿ ಪ್ರಸಿದ್ಧಿಯಾಗಿದೆಯೆಂದು ಸರ್ಕಾರ ದವರ ಗಮನಕ್ಕೆ ಬಂದಿದೆಯೇ ;

ಈ. ಹಾಗಿದ್ದಲ್ಲಿ ಒಂದು ರೇಷ್ಮೆಯ ಕೈಗಾರಿಕೆಯನ್ನು ಇನ್ನೂ ಸ್ಥಾಪಿಸದಿರಲು ಕಾರಣವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು) :—

ಅ. ಬಂದಿದೆ.

ಆ. 1-11-1982 ರಿಂದ ಸರ್ಕಾರವು ನೀಡಿರುವ ಹೊಸ ಪ್ರೋತ್ಸಾಹಗಳು ಮತ್ತು ರಿಯಾ ಯಿತಿಗಳ ಆದೇಶದಿಂದ ಮೊಳಕಾಲ್ಮೂರು ತಾಲ್ಲೂಕನ್ನು 2ನೇ ವಲಯದಲ್ಲಿ ಅಳವಡಿಸ ಲಾಗಿದೆ.

ಇ. ಬಂದಿದೆ.

ಈ. ಸರಕಾರಿ ವತಿಯಲ್ಲಿ ರೇಷ್ಮೆ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ದೇಶಗಳಿಲ್ಲ.

ವಿಷಯ :— ಉಚ್ಚ ನ್ಯಾಯಾಲಯವನ್ನು ಕಟ್ಟುವ ಬಗ್ಗೆ.

ಪ್ರಶ್ನೆ 128(98) ಶ್ರೀ ಎಂ. ಜಿ. ಜರತಾರ್‌ಗರ್ (ಹುಬ್ಬಳ್ಳಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ಬೆಂಗಳೂರು ಹಳೆಯ ಅಠಾರ ಕಛೇರಿಯನ್ನು ರೋಮನ್ ಹಾಗೂ ಗ್ರೀಕ್ ಶೈಲಿಯಲ್ಲಿ ಕಟ್ಟಿರುವ ಕಟ್ಟಡದ ಉದ್ಘಾಟನೆಯಾದದ್ದು ಯಾವ ವರ್ಷದಲ್ಲಿ ಹಾಗೂ ಇದಕ್ಕೆ ತಗುಲಿದ ವೆಚ್ಚ ಎಷ್ಟು ;

ಆ. ಮೇಲ್ಕಂಡ ಕಟ್ಟಡದ ಆಯುಷ್ಯ ಅವಧಿ ಎಷ್ಟು ಹಾಗೂ ಇನ್ನು ಎಷ್ಟು ವರ್ಷ ಬಾಳಲಿದೆ ಮತ್ತು ಸರ್ಕಾರವು ಇದನ್ನು ಕೆಡವಿ ಇಂಥದೇ ಬೇರೊಂದು ಕಟ್ಟಡ ಕಟ್ಟುವ ವಿಚಾರ ಮಾಡು ತ್ತಿರುವುದು ನಿಜವೇ ;

ಇ. ಇಂಥದೇ ಬೇರೊಂದು ಕಟ್ಟಡ ಕಟ್ಟುವ ನಿರ್ಧಾರವಿದ್ದರೆ ಅದಕ್ಕೆ ಬರಬಹುದಾದ ಅಂದಾಜು ವೆಚ್ಚ ಎಷ್ಟು ಹಾಗೂ ಎಷ್ಟು ಅವಧಿಯಲ್ಲಿ ನಿರ್ಮಿಸಲಾಗುವುದು ಎಂಬುದನ್ನು ತಿಳಿಸುವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು) :—

ಅ. ಅಠಾರ ಕಛೇರಿಯು ನೆಲ ಅಂತಸ್ತನ್ನು 1864ರಲ್ಲೂ ಮತ್ತು ಒಂದನೇ ಅಂತಸ್ತನ್ನು 1867 ರಲ್ಲೂ ಕಟ್ಟಲ್ಪಟ್ಟಿತು. ಸದರಿ ಕಟ್ಟಡದ ಉದ್ಘಾಟನೆಯು ಸುಮಾರು 1868ರಲ್ಲಿ ನೆರವೇರಿರುತ್ತದೆ. ಈ ಕಟ್ಟಡದ ಕಾಮಗಾರಿಗೆ ತಗಲಿದ ವೆಚ್ಚ ಒಟ್ಟು 13,14,200-00 ರೂಪಾಯಿಗಳು.

ಆ. ಸಾಮಾನ್ಯವಾಗಿ ಇಂತಹ ಕಟ್ಟಡದ ಆಯುಷ್ಯ ಸುಮಾರು ನೂರು ವರ್ಷಗಳು. ಈಗ ಈ ಕಟ್ಟಡದ ವಯಸ್ಸು 115 ವರ್ಷಗಳಾಗಿರುತ್ತದೆ. ಈಗಾಗಲೇ ಕಟ್ಟಡದ ಕೆಲವು ಭಾಗಗಳಲ್ಲಿ ಬಿರುಕುಗಳು ಕಾಣಿಸಿಕೊಂಡಿರುವುದರಿಂದ ಈ ಕಟ್ಟಡವು ಇನ್ನು ಎಷ್ಟು ವರ್ಷ ಬಾಳಲಿದೆ ಎಂದು ಹೇಳಲು ಸಾಧ್ಯವಿಲ್ಲ. ಸರ್ಕಾರವು ಈ ಕಟ್ಟಡವನ್ನು ಕೆಡವಿ ಇಂತದೇ ಬೇರೊಂದು ಕಟ್ಟಡವನ್ನು ನಿರ್ಮಿಸಲು ನಿರ್ಧರಿಸಿದೆ.

ಇ. ಈಗ ಹಾಲಿಕಟ್ಟಡದ ಶೈಲಿಯಂತೆ ಇನ್ನೂ ಹೆಚ್ಚಿನ ಸ್ಥಳಾವಕಾಶ ಹೊಂದಿದ್ದು ಕಟ್ಟಬೇಕೆಂದಿರುವ ಕಟ್ಟಡ ನಿರ್ಮಿಸಲು ತಗಲುವ ವೆಚ್ಚ ಅಂದಾಜು ಪಟ್ಟಿಯ ಪ್ರಕಾರ 11 ಕೋಟಿ ರೂಪಾಯಿಗಳು ಈ ಕಟ್ಟಡವನ್ನು ಸುಮಾರು 5 ವರ್ಷಗಳ ಅವಧಿಯಲ್ಲಿ ಮುಗಿಸಲು ಉದ್ದೇಶಿಸಲಾಗಿದೆ.

ಶ್ರೀ ಎಂ. ಜಿ. ಜರತಾರ್‌ಗರ್.—ಅಧ್ಯಕ್ಷರೇ ಇಂಥ ಅಂದ ಚೆಂದದ ರೋಮನ್ ಗ್ರೀಕ್ ಮಾದರಿಯಲ್ಲಿ ಕಟ್ಟಿರುವ ಅಠಾರ ಕಚೇರಿಯ ಕಟ್ಟಡವನ್ನು ಕೆಡವಿಸುವುದು ಸರಿಯಲ್ಲವೆಂದು ಬುದ್ಧಿವಂತ ಜನರ ಅಭಿಪ್ರಾಯವಾಗಿದೆ. ಇದನ್ನು ಕೆಡವಿಸದೆ ಬೇರೆ ಸ್ಥಳದಲ್ಲಿ ನ್ಯಾಯಾಲಯಕ್ಕೆ ಬೇಕಾದ ಕಟ್ಟಡ ಕಟ್ಟುವುದಕ್ಕೆ ತಮ್ಮ ನಿರ್ಧಾರವನ್ನು ಪುನರ್ ಪರಿಶೀಲನೆ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಈ ಕಟ್ಟಡವನ್ನು ಉಳಿಸಿಕೊಳ್ಳಬೇಕು, ಇದು ಚರಿತ್ರಾರ್ಹವಾದ ಕಟ್ಟಡ, ಇದನ್ನು ಕೆಡವಿಸಬಾರದು ಎಂದು ಹೇಳುವಂಥ ಅಭಿಪ್ರಾಯವುಳ್ಳ ಜನರು ಕೆಲವರಿದ್ದಾರೆ, ಸರ್ಕಾರ ಈಗಾಗಲೇ ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಹಳೆಯ ಅಠಾರ ಕಛೇರಿಯ ಸ್ವರೂಪದಲ್ಲಿ ಅದರ ಆಕಾರ ವಿಕಾರ ಎಲ್ಲವನ್ನು ಗಮನದಲ್ಲಿಟ್ಟುಕೊಂಡು ಅದೇ ಮಾದರಿಯಲ್ಲಿ ಇನ್ನೊಂದು ಕಟ್ಟಡವನ್ನು ಕಟ್ಟಬೇಕೆಂದು ಮಾಡಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.—ಇದಕ್ಕೆ ಯಾವ ಬಣ್ಣ ಬಳಿಯುತ್ತೀರಿ ?

ಶ್ರೀ ಹೆಚ್. ಡಿ.ದೇವೇಗೌಡ.—ಈಗ ಇರುವ ಬಣ್ಣವನ್ನೇ ಹೊಡೆಯುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಂಗ್ಲೇಂಡ್ ಮತ್ತು ಐರೋಪ್ಯ ರಾಷ್ಟ್ರಗಳಲ್ಲಿ ಹಳೆಯ ಕಟ್ಟಡಗಳನ್ನು ಉಳಿಸಿಕೊಂಡು ಅದಕ್ಕೆ ಬೇಕಾದಂಥ ಆಧುನಿಕ ತಾಂತ್ರಿಕತೆಯನ್ನು ಉಪಯೋಗ ಮಾಡಿಕೊಂಡು ಅದೇ ಕಛೇರಿಯಲ್ಲಿಯೇ ಕೆಲಸ ನಡೆಸುತ್ತಿರುತ್ತಾರೆ. ಅದೇತರಹ ಅತ್ಯಾಧುನಿಕ ಸಾಧನಗಳು ಇರತಕ್ಕ ಕಾಲದಲ್ಲಿ ಈ ಅಂಟಿಕ್ ಬಿಲ್ಡಿಂಗನ್ನು ಉಳಿಸಿಕೊಳ್ಳುವ ದೃಷ್ಟಿಯಲ್ಲಿ ತಾವೇನಾದರೂ ಆಲೋಚನೆ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಸಭೆಗೆ ವಾಸ್ತವಾಂಶವನ್ನು ಹೇಳುವುದಾದರೆ ಹಣದ ಕೊರತೆ ಇದೆ. ಇದಕ್ಕೆ ಸುಮಾರು 15 ಕೋಟಿ ರೂಪಾಯಿಗಳು ಬೇಕಾಗಬಹುದು ಎಂದು ಅಂದಾಜು ಮಾಡಲಾಗಿದೆ. ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರೂ ಸಹ ಈ ಕೆಲಸ ಮುಗಿಯಲಿಕ್ಕೆ ನಾಲ್ಕೈದು ವರ್ಷಗಳಾದರೂ ಬೇಕಾಗಬಹುದು. ಇದಕ್ಕೆ ನಾವು ಪ್ರತಿ ವರ್ಷ 3-4 ಕೋಟಿ ರೂಪಾಯಿಗಳನ್ನಾದರೂ ಕೊಡಬೇಕಾಗುತ್ತದೆ. ತಮಗೆ ಗೊತ್ತಿರುವ ಹಾಗೆ ನಮ್ಮಲ್ಲಿ ನೀರಾವರಿ ಮತ್ತು ಬೇರೆ ಬೇರೆ ಹಣಗಳಿಗೆ ಹಣ ಇಲ್ಲದೆ ಸಾಕಷ್ಟು ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಕಟ್ಟಡವನ್ನು ಕಟ್ಟುವುದಕ್ಕೆ ನಾವು ಸ್ವಲ್ಪ ಸ್ವಲ್ಪ ಹಣವನ್ನು ಕೊಟ್ಟುಕೊಂಡು ಹೋದರೂ ಸುಮಾರು ವರ್ಷಗಳು ಬೇಕಾಗಬಹುದು. ಈಗ ಇರತಕ್ಕ ಕಟ್ಟಡದಲ್ಲಿ ಭಾಗಾಶ ಕಟ್ಟಡವನ್ನು ಕೆಡವಿಕೊಂಡು ಕೆಲಸ ಮಾಡುತ್ತಾ ಹೋದರೂ ಅಲ್ಲಿ ಸ್ಥಳದ ಅಭಾವವನ್ನು ನೀಗಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ವೆಚ್ಚ ತುಂಬಾ ಹೆಚ್ಚಾಗುತ್ತದೆ, ಇದರ ಬಗ್ಗೆ ನಾವು ಯಾವ ರೀತಿಯಾಗಿ ವೆಚ್ಚ ಕಡಿಮೆ ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಇದನ್ನು ಉಳಿಸಿಕೊಳ್ಳುವುದಕ್ಕೆ ನಮ್ಮ ನಿರ್ಧಾರವನ್ನು ಪುನರ್ ಪರಿಶೀಲನೆ ಮಾಡುತ್ತೀರಾ ಎಂದು ಕೇಳಿದ್ದಾರೆ, ಇದಕ್ಕೆ ನಮ್ಮಲ್ಲಿ ಪೂರ್ವಪೀಡಿತ ನಿರ್ಣಯವನ್ನೇನೂ ನಾವು ಮಾಡಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಕೆಲವು ದಿವಸಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳನ್ನು ಕೆಲವರು ಇದೇ ವಿಚಾರದಲ್ಲಿ ಭೇಟಿ ಮಾಡಿದಾಗ ಅವರು ಈ ಕಟ್ಟಡವನ್ನು ಹೊಸದಾಗಿ ಕಟ್ಟಿಯೇ ಕಟ್ಟುತ್ತೇವೆಂದು ಹೇಳಿದ್ದರು. ಅವರ ಮಾತಿಗೂ ಮತ್ತು ತಮ್ಮ ಮಾತಿಗೂ ಈಗ ವ್ಯತ್ಯಾಸ ಕಾಣುತ್ತದೆ. ಈಗ ನಾವು ಪೂರ್ವಪೀಡಿತ ಅಭಿಪ್ರಾಯವನ್ನೇನೂ ನಾವು ಹೊಂದಿಲ್ಲವೆಂದು ಹೇಳುತ್ತಿದ್ದೀರಿ. ಈ ಎರಡು ಮಾತುಗಳಲ್ಲಿ ನಾವು ಯಾವುದನ್ನು ಒಪ್ಪಬೇಕು ?

ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ಮುಖ್ಯಮಂತ್ರಿಗಳು, ಮುಖ್ಯ ನ್ಯಾಯಾಧೀಶರು ಮತ್ತು ಇತರ ನ್ಯಾಯಾಧೀಶರೊಡನೆ ಇದರ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ.

ಮಾನ್ಯ ವಿರೋಧ ಪಕ್ಷದ ನಾಯಕರು ಇದು ಚರಿತ್ರಾರ್ಹವಾದ ಕಟ್ಟಡ ಇದನ್ನು ಉಳಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳಿದ್ದಕ್ಕೆ ನಾನು ಆ ಮಾತನ್ನು ಹೇಳಿದ್ದೇನೆ. ಅಷ್ಟು ಬಿಟ್ಟು ಇದರಲ್ಲಿ ಮತ್ತೇನೂ ಇಲ್ಲ. ಆವತ್ತು 11 ಕೋಟಿಗೆ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಆಗಿದೆ. ಈಗ 15 ಕೋಟಿ ಆಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಹಂತಹಂತವಾಗಿ ಯೋಜನೆ ಮಾಡಿದರೆ 20 ವರ್ಷಗಳಾಗುತ್ತದೆ. ಈ 20 ವರ್ಷಗಳಲ್ಲಿ 150 ಕೋಟಿ ಆಗಬಹುದು. ಆದುದರಿಂದ ಇದನ್ನು ಕೈಬಿಟ್ಟು ಈಗಿರುವ ಕಟ್ಟಡವನ್ನು ದುರಸ್ತಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಹಣಕ್ಕಿಂತ ಹೆಚ್ಚಾಗಿ ತಾಂತ್ರಿಕವಾಗಿ ಸಲಹೆಯನ್ನು ಪಡೆದು ಈ ಕಟ್ಟಡವನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಿದೆಯೇ ಎಂದು ನೋಡೋಣ. ಏಕೆಂದರೆ ರಾಜ್ಯದ ಉಚ್ಚ ನ್ಯಾಯಾಲಯಕ್ಕೆ ಯೋಗ್ಯವಾದಂಥ ಸ್ಥಳ ಕೊಡುವುದು ನಮ್ಮ ಕರ್ತವ್ಯವಿದೆ. ಅದಕ್ಕೆ ಇದು ಅಡಿ ಬರಬಾರದು. ತಜ್ಞರ ಸಲಹೆಯ ಮೇಲೆ ಈ ಕಟ್ಟಡವನ್ನು ಉಳಿಸಿಕೊಂಡು ಸ್ಟ್ರೆಂತೆನ್ ಮಾಡಲಿಕ್ಕೆ ಸಾಧ್ಯವಿದೆಯೇ ಎಂದು ಯೋಚನೆ ಮಾಡೋಣ.

ಶ್ರೀ ಕೆ. ಮಲ್ಲಪ್ಪ.—ಈಗ ಆಧುನಿಕ ರೀತಿಯಲ್ಲಿ ಸಿಮೆಂಟ್ ಕಂಭಗಳನ್ನು ಹಾಕುವುದರ ಮೂಲಕ ಕಟ್ಟಡ ಕಟ್ಟುತ್ತಿದ್ದಾರೆ. ಆದುದರಿಂದ ಈ ಕಟ್ಟಡವನ್ನು ಹೀಗೆಯೇ ಉಳಿಸಿಕೊಂಡು ಸಿಮೆಂಟ್ ಕಂಭಗಳನ್ನು ಮತ್ತು ಮೇಲ್ಛಾವಣಿಯನ್ನು ಹಾಕುವುದಕ್ಕೆ ಸಾಧ್ಯವೇ ? ಎರಡನೆಯದಾಗಿ, ಖಾಸಗಿಯವರು 200-300 ವರ್ಷಗಳ ಹಿಂದೆ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಈಗ ಅದಕ್ಕೆ ಆಯಸ್ಸು ಮುಗಿಯುತ್ತಾ ಬಂದಿದೆ. ಆದುದರಿಂದ ನಗರ ಪ್ರದೇಶದಲ್ಲಿ ಆಯಸ್ಸಿನಂಥ ಮನೆಗಳನ್ನು ಸರ್ಕಾರ ಕೆಡವಿ ಅವರಿಗೆ ಹೊಸದಾಗಿ ಮನೆ ಕಟ್ಟಿಕೊಡಲಿಕ್ಕೆ ಯೋಚನೆ ಮಾಡುತ್ತದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ.—ಎರಡನೇ ಪ್ರಶ್ನೆಗೆ ನಾನು ಉತ್ತರ ಕೊಡಲಿಕ್ಕೆ ಆಗುವುದಿಲ್ಲ. ಮೊದಲನೇ ಪ್ರಶ್ನೆಗೆ ಉತ್ತರ ಹೇಳುವುದಾದರೆ ಇದಕ್ಕೆ ತಾಂತ್ರಿಕವಾಗಿ ನಿರ್ಣಯ ಆಗಬೇಕು. ಇದು ಪೊಲಿಟಿಕಲ್ ಡಿಸಿಷನ್ ಅಲ್ಲ. ಹಳೇ ಕಟ್ಟಡವನ್ನು ಉಳಿಸಿಕೊಳ್ಳುವುದರ ಬಗ್ಗೆ ತಜ್ಞರ ಸಲಹೆ ಪಡೆದು ಯೋಚನೆ ಮಾಡೋಣ ಎಂದು ಆಗಲೇ ಹೇಳಿದೆ.

ಶ್ರೀ ಹೆಚ್. ಗಂಗಾಧರನ್.—ಈಗ ಹೊಸದಾಗಿ ಕಟ್ಟಡವನ್ನು ಕಟ್ಟುವುದಾದರೆ ನಾನು ಒಂದು ಮಾತನ್ನು ಹೇಳುತ್ತೇನೆ. ಈಗ ಇಲ್ಲಿ ವಿಧಾನಸೌಧ ಇದೆ, ಇದು ಹೆಚ್ಚು ಜನಸಂದಣಿ ಇರತಕ್ಕ ಪ್ರದೇಶ. ಆದುದರಿಂದ ಬೆಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್ ಇದ್ದಹಾಗೆ ಇದನ್ನು ನಗರದಿಂದ ಸ್ವಲ್ಪ ದೂರವಾದ ಪ್ರದೇಶದಲ್ಲಿ ಏಕೆ ಹಾಕಬಾರದು ?

ಶ್ರೀ ಹೆಚ್. ಡಿ. ದೇವೇಗೌಡ.—ಜನತೆಗೆ ಹೆಚ್ಚಿನ ಸೌಕರ್ಯ ಆಗಬೇಕು. ಇಲ್ಲಿ ಸೆಕ್ರೆಟೇರಿಯೇಟ್ ಇದೆ, ಪಕ್ಕದಲ್ಲಿ ಉಚ್ಚನ್ಯಾಯಾಲಯ ಇದ್ದರೆ ಜನತೆಗೆ ತೊಂದರೆಯಾಗುತ್ತದೆಯೇ ಎಂಬುದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ಇರತಕ್ಕಂಥ ಆರ್ಕಿಟೆಕ್ಚರನ್ನು ಉಳಿಸಿಕೊಂಡು, ಚರಿತ್ರಾರ್ಹವಾದ ಕಟ್ಟಡವನ್ನು ತೆಗೆಯಲಿಕ್ಕೆ ಪ್ರಯತ್ನ ಮಾಡುವುದಿಲ್ಲ.

ಶ್ರೀ ಕೆ. ರಾಮಭಟ್.—ಮಾನ್ಯ ಮಂತ್ರಿಗಳು ಉತ್ತರದಲ್ಲಿ ಆ ಕಟ್ಟಡದಲ್ಲಿ ಬಿರುಕು ಬಿಟ್ಟಿದೆ ಎಂದು ಹೇಳಿದ್ದಾರೆ. ಇತ್ತೀಚೆಗೆ ಮೈನ್ಸ್ ಅಂಡ್ ಜಿಯಾಲಜಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಕಟ್ಟಡ ಕುಸಿದು ಜೀವಹಾನಿಯಾಗಿದೆ ಆದುದರಿಂದ ಇದರ ಬಗ್ಗೆ ಏನು ತುರ್ತಾಗಿ ಕ್ರಮ ಕೈಗೊಂಡಿದ್ದೀರಿ, ಇದರ ಬಗ್ಗೆ ಏನಾದರೂ ತುರ್ತಾಗಿ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಇರತಕ್ಕಂಥ ಕಟ್ಟಡ ಕುಸಿದು ನ್ಯಾಯಾಧೀಶರಿಗೆ ಅಪಾಯವಾಗದಂತೆ ನೋಡಿಕೊಳ್ಳುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಈಗಾಗಲೇ ಮಾನ್ಯ ಮಂತ್ರಿಗಳು 15-20 ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಎಂದು ಹೇಳಿದರು ಅದನ್ನು ನಿಲ್ಲಿಸಿ ಬೇರೆ ಕಡೆ ಕಟ್ಟಡ ಕಟ್ಟುವಂಥ ಸ್ಪಷ್ಟವಾದಂಥ ಹೇಳಿಕೆಯನ್ನು ಕೊಡಲಿಕ್ಕೆ ಸಾಧ್ಯವೇ ?

ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿ ಎರಡು ವಿಷಯಗಳಿವೆ. ಈಗ ಬೇರೆ ಕಡೆ ಸ್ಥಳಾಂತರ ಮಾಡತಕ್ಕ ಪ್ರಶ್ನೆಯಿಲ್ಲ. ಇದನ್ನು ಸ್ಪಷ್ಟ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಅದಕ್ಕೆ ತಾಂತ್ರಿಕ ಶಕ್ತಿ ಕೊಟ್ಟು ಚರಿತ್ರಾರ್ಹವಾದ ಕಟ್ಟಡವನ್ನು ಉಳಿಸಿಕೊಳ್ಳಲಿಕ್ಕೆ ಸಾಧ್ಯವಾದರೆ ಅದನ್ನು ಮಾಡಬೇಕು ಎನ್ನತಕ್ಕಂಥಾದ್ದು ಒಂದು. ಇಲ್ಲದೇ ಹೋದರೆ ಕಟ್ಟಡವನ್ನು ಕೆಡವಿ ಇರತಕ್ಕಂಥ ಆರ್ಕಿಟೆಕ್ಚರನ್ನು ಅಳವಡಿಸಿಕೊಳ್ಳಬೇಕು ಎನ್ನುವುದು ಒಂದು. ಈ ಎರಡು ಪ್ರಶ್ನೆಗಳು ಉಳಿದಿವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಸನ್ಮಾನ್ಯ ಲೋಕೋಪಯೋಗಿ ಸಚಿವರು ಹಳೆಯ ಚರಿತ್ರಾರ್ಹವಾದಂಥ ಕಟ್ಟಡವನ್ನು ಉಳಿಸಿಕೊಳ್ಳುವ ದಿಶೆಯಲ್ಲಿ ತಾಂತ್ರಿಕ ತಜ್ಞರ ಸಲಹೆ ಕೇಳುತ್ತೇವೆ ಎಂದು ಹೇಳಿದ್ದು ಸಂತೋಷ. ತಾವು ಹೊಸ ಕಟ್ಟಡವನ್ನು ತೆಗೆದುಕೊಳ್ಳುವ ಮೊದಲು ಚರಿತ್ರಾರ್ಹವಾದಂಥ ಕಟ್ಟಡವನ್ನು ಉಳಿಸಿಕೊಳ್ಳಲಿಕ್ಕೆ ಹೊರಗಿನ ಅಥವಾ ರಾಜ್ಯದ ತಜ್ಞರ ಅಭಿಪ್ರಾಯವನ್ನು ಪಡೆದುಕೊಂಡಮೇಲೆ ಈ ನಿರ್ಣಯವನ್ನು ತೆಗೆದುಕೊಂಡಿದ್ದೀರಾ ಎನ್ನುವುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ನಾವು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಇದಕ್ಕೆ ಫೌಂಡೇಷನ್ ಸ್ಟೋನ್ ಹಾಕಿದೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂಥ ವಿಷಯವನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡೋಣ. ರಾಷ್ಟ್ರಮಟ್ಟದಲ್ಲಿರುವ ಹಿರಿಯ ತಾಂತ್ರಿಕ ತಜ್ಞರನ್ನು ಕರೆಸೋಣ, ಅಂಥಹವರ ಹೆಸರುಗಳು ಇದ್ದರೆ ದಯಮಾಡಿ ತಿಳಿಸಿ. ಜೊತೆಗೆ ತಮ್ಮನ್ನೂ ಕರೆದುಕೊಂಡು ಹೋಗಿ ಹೈಕೋರ್ಟ್ ಬಿಲ್ಡಿಂಗನ್ನು ತೋರಿಸಿ, ನಿಮ್ಮನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮಾಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ವಿರೋಧಪಕ್ಷದ ನಾಯಕರು ಒಂದು ಸಲ ಹೈಕೋರ್ಟ್ ಕಟ್ಟಡ ಮತ್ತು ಅದರ ಸುತ್ತಲೂ ಹೋಗಿ ಬಂದರೆ ಸರ್ಕಾರದ ನಿರ್ಧಾರವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೀರಿ. ಅಲ್ಲಿ ನಡೆಯುತ್ತಾ ಹೋದರೆ ಕೋರ್ಟ್ ಕಟ್ಟಡ ನಡುಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮದ್ರಾಸಿನಲ್ಲಿ ಹಾಗೇ ಇದೆ, ಡೆಲ್ಲಿಯಲ್ಲೂ ಹಾಗೇ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಕಟ್ಟಡವನ್ನು ಉಳಿಸಿಕೊಂಡರೆ ಅದಕ್ಕೆ ಹಾಕಿದಂಥ ಅಸ್ಥಿಭಾರ ಶಿಲೆಯ ಭವಿಷ್ಯವೇನು ?

ಶ್ರೀ ಹೆಚ್. ಡಿ. ದೇವೇಗೌಡ.—ಯಾವುದೇ ಕಟ್ಟಡವನ್ನು ಒಡೆದು ಹಾಕಬೇಕು ಎನ್ನತಕ್ಕ ಪ್ರಶ್ನೆ ಇಲ್ಲ. ತಾಂತ್ರಿಕ ತಜ್ಞರ ಸಲಹೆ ಪಡೆದು ಅದನ್ನು ಉಳಿಸಿಕೊಳ್ಳಲಿಕ್ಕೆ ಸಾಧ್ಯವಿದೆಯೋ ಎಂಬುದನ್ನು ನೋಡೋಣ. ಹಳೆಯ ಆರ್ಕಿಟೆಕ್ಟರನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಅಡಿಷನಲ್ ಸ್ಟ್ರೆಂತನ್ ಮಾಡಿ ಉಳಿಸಿಕೊಳ್ಳಲಿಕ್ಕೆ ಸಾಧ್ಯವಾದರೆ ಕ್ರಮ ತೆಗೆದುಕೊಳ್ಳುತ್ತೇವೆ. ಆಗುವುದೇ ಇಲ್ಲ ಅಂದರೆ ಆಗ ಯೋಚನೆ ಮಾಡೋಣ.

ಶ್ರೀ ಕೆ. ಮಲ್ಲಪ್ಪ.—3 ವರ್ಷಗಳ ಹಿಂದೆ ಕಟ್ಟಡ ಕುಸಿದು ಅಪಾಯ ಸಂಭವಿಸಿದೆ. 200–300 ವರ್ಷಗಳ ಪುರಾತನ ಮನೆಗಳು ಬಿದ್ದು ದುರಂತವಾದರೆ ತೊಂದರೆಯಾಗುತ್ತದೆ. ಆದುದರಿಂದ ಇದರ ಬಗ್ಗೆ ಸರ್ಕಾರ ಏಕೆ ಕಾಳಜಿ ವಹಿಸಬಾರದು ?

ಶ್ರೀ ಹೆಚ್. ಡಿ. ದೇವೇಗೌಡ.—ಆಗಲೇ ನಾನು ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದೆ.

ವಿಷಯ :– ಶಿವಮೊಗ್ಗ ಟೌನಿಗೆ ಸಿಮೆಂಟಿನ ಸರಬರಾಜು

ಪ್ರಶ್ನೆ 129(109) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಕಳೆದ ತಿಂಗಳಿನಿಂದ ಶಿವಮೊಗ್ಗ ಜಿಲ್ಲೆಗೆ ಎಷ್ಟು ಸಿಮೆಂಟ್ ಒದಗಿಸಲಾಗಿದೆ ;

ಆ. ಶಿವಮೊಗ್ಗಾ ನಗರಕ್ಕೆ ಖಾಸಗಿ ಉಪಯೋಗಕ್ಕೆ ಸಾರ್ವಜನಿಕ ಕಟ್ಟಡಗಳಿಗೆ, ಸರ್ಕಾರಿ ಇಲಾಖೆಗಳಿಗೆ ಸರಬರಾಜು ಮಾಡಿದ ಪ್ರಮಾಣವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

ಅ. 6,942 ಚೀಲಗಳು.

			ಚೀಲಗಳಲ್ಲಿ
ಆ.	1.	ಖಾಸಗಿ ಉಪಯೋಗಕ್ಕೆ (ಸಾರ್ವಜನಿಕರಿಗೆ)	690
	2.	ಸಾರ್ವಜನಿಕ ಕಟ್ಟಡಗಳು	85
	3.	ಸರ್ಕಾರಿ ಇಲಾಖೆಗಳು, ನಿಗಮಗಳು.	2,850

ಶ್ರೀ ಎಂ. ಆನಂದರಾವ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಇಡೀ ಶಿವಮೊಗ್ಗ ಜಿಲ್ಲೆಗೆ 6,942 ಚೀಲ ಸಿಮೆಂಟ್ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದರ ಜೊತೆಗೆ ಶಿವಮೊಗ್ಗ ನಗರಕ್ಕೆ 3,625 ಕೊಟ್ಟಿದ್ದೇವೆಂದು ಹೇಳಿದ್ದಾರೆ ; ಈ 3,625 ಚೀಲಗಳು ಇಡೀ ಜಿಲ್ಲೆಗೆ ಕೊಟ್ಟಿರುವ 6,942 ಚೀಲಗಳಲ್ಲಿ ಸೇರಿದೆಯೇ ? ಶಿವಮೊಗ್ಗ ನಗರದಲ್ಲಿ ಖಾಸಗಿ ಉಪಯೋಗಕ್ಕೆ 690 ಮೂಟೆ ಗಳನ್ನು ಮಾತ್ರ ಕೊಟ್ಟಿದ್ದಾರೆ. ಇಡೀ ಶಿವಮೊಗ್ಗ ನಗರದಲ್ಲಿ ನಡೆಯುತಕ್ಕ ಖಾಸಗೀ ಕಟ್ಟಡಗಳಿಗೆ ಇಷ್ಟೇ ಸಾಕೇ, ಇದರಿಂದ ಬ್ಲಾಕ್ ಮಾರ್ಕೆಟ್‌ಗೆ ಅವಕಾಶವಾಗುತ್ತದೆ ಎಂದು ನನ್ನ ಅಭಿಪ್ರಾಯ. ಶಿವಮೊಗ್ಗ ಜಿಲ್ಲೆಯೊಳಗೆ ಭದ್ರಾವತಿ ಸಿಮೆಂಟ್ ಕಾರ್ಖಾನೆ ಇದೆ. ಆದರೆ ಶಿವಮೊಗ್ಗ ಜಿಲ್ಲೆಯವರು ಅಮ್ಮಸಂದ್ರ ಮತ್ತು ಆಂಧ್ರದ ಕಾರ್ಖಾನೆಗಳಿಂದ ಸಿಮೆಂಟ್ ತರಬೇಕು ಎಂದು ಸರ್ಕಾರಿ ಆಜ್ಞೆಯಾಗಿದೆ. ಈ ನೀತಿ ಸರಿಯೇ, ಇದರಿಂದ ಬ್ಲಾಕ್ ಮಾರ್ಕೆಟ್‌ಗೆ ಅವಕಾಶವಾಗಿದೆಯೆಂದು ಹೇಳುತ್ತೇನೆ. ಆದುದರಿಂದ ಸರ್ಕಾರ ಸಿಮೆಂಟ್ ಕೊಡುವುದರಲ್ಲಿ ಶಿವಮೊಗ್ಗ ಜಿಲ್ಲೆಗೆ ತಾರತಮ್ಯ ಮಾಡುತ್ತಾ ಇದೆ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಎಸ್. ಆರ್. ಬೊಮ್ಮಾಯಿ.—ಶಿವಮೊಗ್ಗ ಜಿಲ್ಲೆಗೆ ತಾರತಮ್ಯ ಮಾಡತಕ್ಕ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ರಾಜ್ಯಕ್ಕೆ ಬಂದಂಥ ಸಿಮೆಂಟನ್ನು ಎಲ್ಲಾ ಜಿಲ್ಲೆಗಳಿಗೂ ಸಮನಾಗಿ ಕೆಲವು ಆಧಾರಗಳ ಮೇಲೆ ಹಂಚಿಕೆ ಮಾಡುತ್ತೇವೆ. 3 ತಿಂಗಳಿಂದ ವಿದ್ಯುಚ್ಛಕ್ತಿ ಕಡಿತ ಇದ್ದುದರಿಂದ ರಾಜ್ಯದಲ್ಲಿರತಕ್ಕ ಸಿಮೆಂಟ್ ಕಾರ್ಖಾನೆಗಳು ತಮ್ಮ ಉತ್ಪಾದನೆಯನ್ನು ನಿಲ್ಲಿಸಿದುವು. ಹೀಗಾಗಿ ನಮ್ಮ ಸರ್ಕಾರ ಕೇಂದ್ರ